

# ಉಮಾ ರಾವ್

ಕನ್ನಡದ ಸೂಕ್ಷ್ಮ, ಅಪ್ಪಟ ಆಧುನಿಕ ಸಂವೇದನೆಯ ಲೇಖಕಿ ಉಮಾ ರಾವ್. ಯಾವುದೇ ಭಾರಗಳಿಲ್ಲದೆ ಬದುಕನ್ನು ಮುಕ್ತವಾಗಿ, ಸರಳವಾಗಿ ನೋಡುವ ಅವರ ಬರವಣಿಗೆ ಕನ್ನಡ ಸಾಹಿತ್ಯಕ್ಕೆ ಹೊಸನುಡಿಗಟ್ಟೊಂದನ್ನು ಸೇರಿಸಿದೆ. ಕತೆಗಾರ್ತಿ, ಕಾದಂಬರಿಗಾರ್ತಿ, ಪ್ರವಾಸಿ ಬರಹಗಳ ಲೇಖಕಿ, ಅಂಕಣಕಾರ್ತಿ, ಟೀವಿ ಕಾರ್ಯಕ್ರಮಗಳ, ಜೀವನಚರಿತ್ರೆಗಳ ಲೇಖಕಿ ಹೀಗೆ ಹಲವು ಪ್ರಕಾರಗಳಲ್ಲಿ ಅವರ ಛಾಪು ಮೂಡಿದೆ.

ಬೆಂಗಳೂರಿನವರಾದ ಉಮಾ ಬಿ.ಎಸ್ಸಿ; ಬಿ.ಎಲ್ ಪದವೀಧರರು. 19 ವರ್ಷಕ್ಕೆ ಮದುವೆಯಾಗಿ ಪತಿಯೊಂದಿಗೆ ಮುಂಬಯಿಗೆ ಹೋದ ಅವರ ಸಾಹಿತ್ಯಿಕ ಬರವಣಿಗೆ ಶುರುವಾಗಿದ್ದು ಅಲ್ಲಿಯೇ. ಅವರು ಹಲವು ನಾಟಕಗಳಲ್ಲಿ ಅಭಿನಯಿಸಿದ್ದಾರೆ. 1994ರಲ್ಲಿ ಕೆನಡಾದ ವ್ಯಾಂಕೂವರ್‌ನ ಬ್ರಿಟಿಷ್ ಕೊಲಂಬಿಯಾ ವಿಶ್ವವಿದ್ಯಾಲಯದ 'ಕ್ರಿಯೇಟಿವ್ ರೈಟಿಂಗ್ ವಿಭಾಗ'ದ 'ಆಂಡ್ರ್ಯೂಸ್ ಫೆಲೋಶಿಪ್' ಪಡೆದ ಅವರು ಅಲ್ಲಿ 3 ತಿಂಗಳು ಅಧ್ಯಯನ ಮಾಡಿದ್ದಾರೆ.

'ಅಗಸ್ತ್ಯ', 'ಕಡಲ ಹಾದಿ', 'ಸಿಲೋನ್ ಸುಶೀಲಾ, ಹಾವಾಡಿಗ, ಮೀಸೆ ಹೆಂಗಸು ಮತ್ತು ಇತರರು' ಅವರ ಕಥಾ ಸಂಗ್ರಹಗಳಾಗಿವೆ. 'ನೂರುಸ್ವರ', 'ವನಜಮ್ಮನ ಸೀಟು' ಅವರ ಕಾದಂಬರಿಗಳು. 'ಅವಳ ಸೂರ್ಯ' ಕೆನೆಡಿಯನ್ ಲೇಖಕಿಯರ ಕತೆಗಳ ಅನುವಾದ. 'ರಾಕಿ ಪರ್ವತಗಳ ನಡುವೆ ಕ್ಯಾಬರೆ', 'ಇನ್ನು ಎಲ್ಲಿಗೋಟ' ಅವರ ಪ್ರವಾಸ ಕಥನಗಳಾಗಿವೆ. 'ಮುಂಬಯಿ ಡೈರಿ' ಅಂಕಣಗಳ ಸಂಗ್ರಹವಾಗಿದ್ದು, 'ದಲೈಲಾಮಾ' ಎಂಬ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಬರೆದಿದ್ದಾರೆ. ಖ್ಯಾತ ಸಿನಿ ಛಾಯಾಗ್ರಾಹಕ ವಿ.ಕೆ. ಮೂರ್ತಿ ಅವರ ಜೀವನ ಚರಿತ್ರೆ 'ಬಿಸಿಲು ಕೋಲು' ಅವರಿಗೆ ಖ್ಯಾತಿ ತಂದುಕೊಟ್ಟ ಪುಸ್ತಕ. ಉಮಾ, ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ನಾನು ಯಾರೆಂದು ತಿಳಿಯಬಾರದು. ಆದರೆ ನನಗೆ ಅವರ ಪ್ರತಿಕ್ರಿಯೆ ತಿಳಿಯಬೇಕು! 'ಏನಪ್ಪಾ ಈಗೀಗ ಕಲ್ಪನಾ, ಕವಿತೆಗಳನ್ನೆಲ್ಲ ಬರೆಯೋಕೆ ಶುರು ಮಾಡಿ ಬಿಟ್ಟಿದ್ದಾರೆ' ಎಂಬ ಮಾತುಗಳನ್ನು ಬಿಟ್ಟರೆ ಅದು ನನಗೆ ಅಂಥಾ ಹೆಸರೇನನ್ನೂ ತರಲಿಲ್ಲ! ಮತ್ತೆ ನಾನು ಮದುವೆಯಾಗಿ ಮುಂಬೈಗೆ ಹೋಗಿ ಏಳೆಂಟು ವರ್ಷಗಳ ನಂತರ ಬರೆಯಲು ಪ್ರಾರಂಭಿಸಿದ್ದು.

ನನ್ನ ಮೇಲೆ ತ್ರಿವೇಣಿ ಅವರ ಪ್ರಭಾವ ಅಗಾಧವಾಗಿ ಆಗಿದ್ದರಿಂದ ಮೊದಲು ನನ್ನ ಬರವಣಿಗೆ ಅವರ ಶೈಲಿಯನ್ನು ಅನುಕರಿಸುತ್ತಿತ್ತು ಅನ್ನಿಸುತ್ತದೆ. ಆದರೆ ನನ್ನ ಓದು ಜಾಸ್ತಿಯಾದಂತೆ ಅದರಿಂದ ಮುಕ್ತಳಾಗಿ ನನ್ನದೇ ಶೈಲಿ ಡೆವಲಪ್ ಮಾಡಿಕೊಳ್ಳ ತೊಡಗಿದೆ. ನಾನು ಮೊದಲು ಬರೆದ ಎರಡು ಕತೆಗಳು 'ಸಿಂಧು' ಮತ್ತು 'ಶೂ ಪಾಲಿಶ್ ಹುಡುಗ'. ಮುಂಬೈ ಬದುಕಿನಲ್ಲಿ ಪ್ರಯತ್ನ ಪಟ್ಟರೂ ಪ್ರಾಮಾಣಿಕವಾಗಿ ಬದುಕಲಾಗದೆ ಜೇಬುಗಳ್ಳಿಯಾದ ಪುಟ್ಟ ಹುಡುಗಿಯ